ಇ) ಸದರಿ ಯೋಜನೆಯನ್ನು 2006–07ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಅಳವಡಿಸಿದ್ದು, ಹಾಗೂ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

705(1064) ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ) : ಮಾನ್ಯ ಪ್ರವಾಸೋದ್ಯಮ ಜವಳಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರದಿಂದ ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ ಬರಬೇಕಾದ ಮೊತ್ತ ಎಷ್ಟು;

ಆ) ಕೈಮಗ್ಗ ಅಭಿವೃದ್ಧಿ ನಿಗಮದಡಿಯಲ್ಲಿ ಎಷ್ಟು ಜನ ನೇಕಾರರು ಕೆಲಸ ಮಾಡುತ್ತಿದ್ದಾರೆ.

ಇ) ಎಲ್ಲಾ ನೇಕಾರರಿಗೂ ಅವರ ಕೆಲಸಕ್ಕೆ ತಕ್ಕಂತೆ ಹಣ ಬಿಡುಗಡೆ ಮಾಡಲಾಗಿದೆಯೇ;

ಈ) ನೇಕಾರರು ಈವರೆಗೂ ಸರ್ಕಾರಕ್ಕೆ ಪೂರೈಸಿದ ಸಮವಸ್ತ್ರಗಳ ಮೊತ್ತ ಎಷ್ಟು;

ಉ) ಸರ್ಕಾರದಿಂದ ನೇಕಾರರಿಗೆ ಬಿಡುಗಡೆ ಮಾಡಿದ ಹಣವೆಷ್ಟು;

ಊ) ಇನ್ನು ಬಾಕಿ ಉಳಿದ ಹಣವೆಷ್ಟು;

ಋ) ಬಾಕಿ ಉಳಿದ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು;

ಎ) ಇದರಿಂದಾಗಿ ನೇಕಾರರ ಜೀವನವು ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಏ) ಇಲ್ಲವಾದಲ್ಲಿ ಕಾರಣವೇನು;

ಶ್ರೀ ಬಿ. ಶ್ರೀರಾಮುಲು (ಪ್ರವಾಸೋದ್ಯಮ ಜವಳಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) :

ಅ) 1. ವಿದ್ಯಾವಿಕಾಸ ಯೋಜನೆ ರೂ. 39.47 ಕೋಟಿ

2. ದೀನ್‌ದಯಾಳ್ ಹತ್‌ಕರ್ಘಾ ಪ್ರೋತ್ಸಾಹನ ಯೋಜನೆ ರೂ. 10.00 ಕೋಟಿ

3. 2006–07ನೇ ಸಾಲಿನ ಅಗ್ಗದ ದರದ ಸೀರೆ ಪಂಚೆ ವಿತರಣೆ ಯೋಜನೆ ಮುಂಗಡ ರೂ. 2.00 ಕೋಟಿ ರೂ. 51.47 ಕೋಟಿ

ಆ) 31ನೇ ಮಾರ್ಚ್ 2006ರ ಅಂತ್ಯಕ್ಕೆ ಒಟ್ಟು 13124 ನೇಕಾರರು.

ಇ) ಹೌದು.

ಆದರೆ 28.6.2006 ರವರೆಗೆ ನೇಕಾರರು ಉತ್ಪಾದಿಸಿದ ಡಿಸೈನ್‌ಗೆ ತಕ್ಕಂತೆ ರೂ. 20.00 ಲಕ್ಷಗಳ ಪರಿವರ್ತನಾ ಹಣ ಪಾವತಿಸಲು ಬಾಕಿ ಇರುತ್ತದೆ.

ಈ) ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಮುಖಾಂತರ 2006–07ನೇ ಸಾಲಿಗೆ ಒಟ್ಟು ರೂ. 43.45 ಕೋಟಿ ಸಮಸ್ತ್ರ ಒಟ್ಟೆಯನ್ನು ಪೂರೈಸಿದೆ.

ಉ) ಮಾರ್ಚ್ 2006ರ ಅಂತ್ಯಕ್ಕೆ ರಾಜ್ಯ ಸರ್ಕಾರದಿಂದ ರೂ. 3.01 ಕೋಟಿ ತಾಲ್ಲೂಕು ಪಂಚಾಯ್ತಿಗಳಿಂದ ರೂ. 0.97 ಕೋಟಿ

ಒಟ್ಟು 3.98 ಕೋಟಿ

ಊ) ರೂ. 39.47 ಕೋಟಿಗಳು

ಋ) ನಿಗಮವು ಸಾರ್ವಜನಿಕ ಶಿಕ್ಷಣ ಇಲಾಖೆಗೆ ರಾಜ್ಯವಲಯದಲ್ಲೇ ಬಾಕಿ ಹಣವನ್ನು ಪಾವತಿಸುವಂತೆ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿದೆ. ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಎ) ಹೌದು.

ಏ) ಅನ್ವಯಿಸುವುದಿಲ್ಲ.

706(1112) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಅತೀ ಗಣ್ಯರ ನಗರದ ಭೇಟಿ ಸಂದರ್ಭದಲ್ಲಿ ಸುಲಲಿತ ಸಂಚಾರಕ್ಕಾಗಿ ವಿಧಾನ ಸೌಧ, ಅಥವಾ ವಿಕಾಸ ಸೌಧದ ಸಮೀಪ ಹೆಲಿಪ್ಯಾಡ್ ನಿರ್ಮಿಸಲು ಸರ್ಕಾರ ಉದ್ದೇಶಿಸಿದೆಯೇ?

ಆ) ಹಾಗಿದ್ದಲ್ಲಿ ಯಾವ ಸ್ಥಳವನ್ನು ಗುರುತಿಸಲಾಗಿದೆ. ಮತ್ತು ಯೋಜನೆಯ ಒಟ್ಟು ವೆಚ್ಚ ಎಷ್ಟು?

ಇ) ಇಲ್ಲದಿದ್ದಲ್ಲಿ ಅತೀ ಗಣ್ಯರ ನಗರದ ಭೇಟಿ ಸಂದರ್ಭದಲ್ಲಿನ ಸಂಚಾರ ನಿಯಂತ್ರಣಕ್ಕೆ ಸರ್ಕಾರ ಪರ್ಯಾಯ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) :

ಅ) ಹೌದು.

ಆ) ಈ ಉದ್ದೇಶಕ್ಕೆ ಅರಮನೆ ಮೈದಾನವನ್ನು ಗುರುತಿಸಿದೆ. ಯೋಜನೆಯ ಖರ್ಚು ವೆಚ್ಚಗಳ ವಿವರಗಳು ಲೋಕೋಪಯೋಗಿ ಇಲಾಖೆಯ ಪರಿಶೀಲನೆಯಲ್ಲಿದೆ.

ಇ) ಉದ್ಭವಿಸುವುದಿಲ್ಲ.

707(1144) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) : ಮಾನ್ಯ ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೂಸೂರು ರಸ್ತೆಯ ಮಾರಾಟ ತೆರಿಗೆ ತಪಾಸಣಾ ಠಾಣೆಯ ಬಳಿ ವಾಹನಗಳ ದಟ್ಟಣೆ ಅತಿಯಾಗಿರುವುದು ಹಾಗೂ ಲಾರಿ ಮತ್ತು ಬಸ್ ಚಾಲಕರುಗಳು ವಾಹನ ಪ್ರವೇಶ ನಿಷಿದ್ಧ ಮಾಡಿರುವ ರಸ್ತೆಯಲ್ಲಿ ವಾಹನ ಚಲಿಸಿ ನಿಯಮ ಉಲ್ಲಂಘನೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?